ಎದುರುದಾರರ ನಂ.4 ಪರ ವಕೀಲರು ಈ ದಿನ ಸಲ್ಲಿಸಲಾದ ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಸಾಕ್ಷಿಯನ್ನು ಪಾಟೀ ಸವಾಲಿಗೆ ಪುನಃ ಕರೆ ಕಳುಹಿಸಲಾಯಿತು.

ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ- ಎದುರುದಾರರ ನಂ.**4** ಪರ ಶ್ರೀ. ಎ ಎನ್ ಐ ವಕೀಲರಿಂದ.

ಅಪಘಾತವು ದಿನಾಂಕ 15-09-2021 ರಂದು ಆಗಿರುತ್ತದೆ. ಅಪಘಾತವಾದಾಗ ಬೆಳಿಗ್ಗೆ 08.00 ಗಂಟೆ ಆಗಿತ್ತು. ಅಪಘಾತದ ಕುರಿತು ಯಾರು ದೂರು ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಅಪಘಾತವು ಯಾವ ಯಾವ ವಾಹನಗಳ ನಡುವೆ ಆಗಿರುತ್ತದೆ ಮತ್ತು ಅವುಗಳ ನೋಂದಣಿ ಸಂಖ್ಯೆ ಹೇಳಲು ಬರುವುದಿಲ್ಲ. ಆ ದಿವಸ ನಾನು ಸವಣೂರಿನಿಂದ ಗದಗಕ್ಕೆ ಹೋಗಿದ್ದು ಇತ್ತು. ಮಹೇಂದ್ರಾ ಗೂಡ್ಸ್ ಟೆಂಪೋ ಗದಗನಿಂದ ಮಾಗಡಿ ಕಡೆಗೆ ಬರುತ್ತಿತ್ತು ಎಂದರೆ ಸರಿ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಮಹೇಂದ್ರಾ ಗೂಡ್ಸ್ ಟೆಂಪೋ ಒಮ್ಮೇಲೆ ಬಸ್ಸಿಗೆ ಅಡ್ಡವಾಗಿ ಬಂದಿದ್ದರಿಂದ ಅಪಘಾತವಾಗಿರುವುದಾಗಿ ಹೇಳಲಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಮಹೇಂದ್ರಾ ಗೂಡ್ಸ್ ಟೆಂಪೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಎಡಗೈಗೆ ಮತ್ತು ಬಲಗಾಲಿಗೆ ಪೆಟ್ಟಾಗಿತ್ತು. ನಾನು ಹೊಲಿಗೆ ಕ್ಲಾಸ್ ಮಾಡುತ್ತಿದ್ದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿಲ್ಲ. ಈಗ ನಾನು ನನ್ನ ಕೆಲಸ ಸ್ವಂತ ಮಾಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನನಗೆ ಮತ್ತು ಗಾಯಗೊಂಡ ಇತರ 10 ಜನರಿಗೆ ಗದಗ ಬಸ್ಸ ಡಿಪೋದ ವ್ಯವಸ್ಥಾಪಕರು ತಾತ್ಕಾಲಿಕ ಪರಿಹಾರ ಅಂತಾ ಪ್ರತಿಯೊಬ್ಬರಿಗೂ ರೂ.1000/- ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ಬಸ್ಸಿ ನ ಚಾಲಕನ ತಪ್ಪಿ ನಿಂದ ಆಗಿಲ್ಲ ಎಂದರೆ

ಸರಿಯಲ್ಲ. ಆದ್ದರಿಂದ ಸಂಸ್ಥೆಯಾಗಲೀ ಅಥವಾ ಚಾಲಕನಾಗಲೀ ನಮಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ. ಬಸ್ಸು ಮತ್ತು ಟೆಂಪೋ ಎರಡರ ಮೇಲೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಪಿ-14 ರಿಂದ 20 ದಾಖಲೆಗಳನ್ನು ಖೊಟ್ಟಿಯಾಗಿ ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).